# ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ.

ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಹತ್ತಿರ, ಮಡಿಕೇರಿ–571201.

**web site : www.mudamadikeri.org** **☎ : 08272-225883**

**Email id : mudamadikeri@yahoo.in** **Fax No: 08272-220386**

ಸಂಖ್ಯೆ:ಮನಅಪ್ರಾ/ಉದ್ಯಾ.ಅಭಿ/ಟೆಂಡರ್/01/2013–14 ದಿನಾಂಕ: 01.01.2014.

## ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ 2011–12 ಸಾಲಿನಲ್ಲಿ ಗದ್ದಿಗೆ ವ್ಯಾಪ್ತಿಯ ಸುತ್ತಮುತ್ತಲಿನ ಖಾಲಿ ಇರುವ ಅಂದಾಜು 5.00ಎಕರೆ ಜಮೀನಿನಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸಿ ಪ್ರಾಧಿಕಾರದ ವತಿಯಿಂದ ನಿರ್ವಹಿಸಲಾಗುತ್ತಿದೆ. ಸದರಿ ಉದ್ಯಾನವನಕ್ಕೆ ತುಂತುರು/ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿ, ಹೆಚ್ಚಿನ ಅಲಂಕಾರಿಕ ಮತ್ತು ಹೂವಿನ ಗಿಡಗಳನ್ನು ಹಾಕಿ ಉದ್ಯಾನವನದ ಆಕರ್ಷಣೆಗಾಗಿ ಉಯ್ಯಾಲೆ, ಜಾರುಬಂಡಿ ಇನ್ನಿತರೆ ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸಲು ಹಾಗೂ ಉದ್ಯಾನವನದಲ್ಲಿ ಕಾವಲುಗಾರರ ಕೊಠಡಿ, ಶೌಚಾಲಯ, ಉಪಹಾರ ಮಂದಿರ ಇವುಗಳನ್ನು ಸಹ ಅಳವಡಿಸಿ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ನಿರ್ವಹಿಸಲು ಅನುಭವವಿರುವ ಅರ್ಹ ಗುತ್ತಿಗೆದಾರರಿಂದ ಕನಿಷ್ಟ ದರದ ದರಪಟ್ಟಿಯನ್ನು ಆಹ್ವಾನಿಸಲಾಗಿರುತ್ತದೆ. ಅರ್ಹ ಗುತ್ತಿಗೆದಾರರು ಟೆಂಡರ್‌ಗಳನ್ನು ನಿಗಧಿತ ಇ.ಎಂ.ಡಿ.ಯೊಂದಿಗೆ ಲಕೋಟೆಯಲ್ಲಿಟ್ಟು ಸೀಲ್ ಮಾಡಿ ಸೂಚಿತ ದಿನಾಂಕದೊಳಗೆ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿರವರಿಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪ್ರಾಧಿಕಾರದಿಂದ ಪಡೆದುಕೊಳ್ಳಬಹುದಾಗಿರುತ್ತದೆ.

**ಟೆಂಡರ್ ಸಲ್ಲಿಸುವ ಬಗ್ಗೆ ವಿವರ.**

1. ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 01.02.2014ರ ಸಾಯಂಕಾಲ 4.00 ಗಂಟೆಯ ವರೆಗೆ.
2. ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ : 04.02.2014.
3. ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:08.02.2014 ಸಂಜೆ 4.00ಗಂಟೆಯ ವರೆಗೆ.
4. ಟೆಂಡರ್ ತೆರೆಯುವ ದಿನಾಂಕ: 10.02.2014ರ ಸಾಯಂಕಾಲ 4.00 ಗಂಟೆ ಅಥವಾ ಮುಂದೆ ಸೂಚಿಸಿದ ದಿನದಂದು.

ಕೆಲಸ ಮುಗಿಸಬೇಕಾದ ಅವಧಿ 60 ದಿವಸಗಳು.

| ಕ್ರ.ಸಂ | ಉದ್ಯಾನವನ ಅಭಿವೃದ್ಧಿ ಪಡಿಸುವ ಕಾಮಗಾರಿಯ ವಿವರ | ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ(ರೂ.ಗಳಲ್ಲಿ) | ಟೆಂಡರ್ ಠೇವಣಿ 2.5% | ಟೆಂಡರ್ ತೆರಿಗೆ 8% (ಟೆಂಡರ್ ಠೇವಣಿ ಮೇಲೆ)+ಟೆಂಡರ್ ಫಾರಂ ಶುಲ್ಕ ತೆರಿಗೆ |
|---|---|---|---|---|
| 1. | a) ತುಂತುರು/ಹನಿ ನೀರಾವರಿ ವ್ಯವಸ್ಥೆ, ಅಲಂಕಾರಿಕ ಮತ್ತು ಹೂವಿನ ಗಿಡಗಳನ್ನು ನೆಡುವುದು, ಉಯ್ಯಾಲೆ, ಜಾರುಬಂಡಿ ಇನ್ನಿತರೆ ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸುವುದು.<br>b) ಕಾವಲುಗಾರರ ಕೊಠಡಿ ಮತ್ತು ಟಿಕೆಟ್ ಕೌಂಟರ್ ನಿರ್ಮಿಸುವುದು<br>c) ಶೌಚಾಲಯ ನಿರ್ಮಿಸುವುದು.<br>d) ಉಪಹಾರ ಮಂದಿರ ನಿರ್ಮಿಸುವುದು. | 26,50,000.00 | 66,250.00 | 5,300+400 |

**ಷರತ್ತುಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.**

ಸಹಿ/–
ಶ್ರೀ ಅನುರಾಗ್ ತಿವಾರಿ,ಭಾ.ಆ.ಸೇ
ಕೊಡಗು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ.

ಸಹಿ/–
ಶ್ರೀ ಗೋವಿಂದ ರಾಜು.ಬಿ.ಜಿ.,
ಆಯುಕ್ತರು(ಪ್ರ),
ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ.